ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಈ ಯೋಜನೆ ಸುಮಾರು 790 ಕೋಟಿ ರೂಪಾಯಿಗಳಾಗಿರುತ್ತದೆ. ಹಾಗೂ ಯೋಜನೆಯನ್ನು ವಿಶ್ವ ಬ್ಯಾಂಕ್‌ಗೆ ಶಿಫಾರಸ್ಸು ಮಾಡಲು ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯಕ್ಕೆ ಕಳುಹಿಸಿಕೊಡಲಾಗಿದೆ.

ಇ) ಯೋಜನೆಯನ್ನು ಇನ್ನೂ ಮಂಜೂರು ಮಾಡಬೇಕಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ದೇವಸ್ಥಾನಗಳಲ್ಲಿ ನಡೆಯುತ್ತಿರುವ ಶಾಲೆಗಳಿಗೆ ಕಟ್ಟಡಗಳು

1739 (2024) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಶಾಲೆಗಳು (ಕನ್ನಡ ಹಾಗೂ ಉರ್ದು ಪ್ರಾಥಮಿಕ) ಸರ್ಕಾರಿ ಕಟ್ಟಡ ಇಲ್ಲದೆ ಇನ್ನೂವರೆಗೂ ಗುಡಗಳಲ್ಲಿ (ದೇವಸ್ಥಾನಗಳಲ್ಲಿ) ನಡೆಯುತ್ತಿರುವುವು; (ತಾಲ್ಲೂಕುವಾರು ವಿವರ ನೀಡುವುದು)

ಆ) ಸರ್ಕಾರಿ ಪ್ರಾಥಮಿಕ ಶಾಲೆಗಳು ಗುಡಿಗಳಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಆದ್ಯತೆಯ ಮೇರೆಗೆ ಈ ಶಾಲೆಗಳಿಗೆ ಕಟ್ಟಡವನ್ನು ಕಟ್ಟಲು ವಿಶೇಷವಾದ ಕ್ರಮ ಕೈಗೊಳ್ಳಲಾಗುವುದೇ;

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಯಾವ-ಯಾವ ಗ್ರಾಮಗಳಲ್ಲಿ ಸರ್ಕಾರಿ ಕನ್ನಡ ಶಾಲೆಗಳು ಗುಡಿಗಳಲ್ಲಿ ನಡೆಯುತ್ತಿರುವುವು;

ಉ) ಬೈಲಹೊಂಗಲ ತಾಲ್ಲೂಕಿನ ಬೈಲವಾಡ ಗ್ರಾಮದಲ್ಲಿ ಉರ್ದು ಪ್ರಾಥಮಿಕ ಶಾಲೆಗೆ ಕಟ್ಟಡ ಇಲ್ಲದೆ ಇರುವುದರಿಂದ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಕೂಡಲೇ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ 90 ಕನ್ನಡ ಪ್ರಾಥಮಿಕ ಹಾಗೂ 29 ಉರ್ದು ಪ್ರಾಥಮಿಕ ಶಾಲೆಗಳು ಸರ್ಕಾರಿ ಕಟ್ಟಡ ಇಲ್ಲದೆ ಇನ್ನೂವರೆಗೂ ಗುಡಿಗಳಲ್ಲಿ ಮಸೀದಿ (ದೇವಸ್ಥಾನಗಳಲ್ಲಿ) ನಡೆಯುತ್ತಿರುವುವು. ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಬಂದಿದೆ.

ಇ) ಅನುದಾನ ಲಭ್ಯತೆಯನ್ನು ಆಧರಿಸಿ ಈ ಶಾಲೆಗಳಿಗೆ ಕಟ್ಟಡವನ್ನು ನಿರ್ಮಿಸಲು ಪ್ರಥಮ ಆದ್ಯತೆಯನ್ನು ನೀಡಲಾಗುವುದು.

ಈ) ಬೈಲಹೊಂಗಲ ತಾಲ್ಲೂಕಿನ 25 ಕನ್ನಡ ಶಾಲೆ, 12 ಉರ್ದು ಶಾಲೆಗಳು ಕಟ್ಟಡವಿಲ್ಲದೆ ಗುಡಿಗಳಲ್ಲಿ ನಡೆಯುತ್ತಿರುವುವು. ಆದರೆ ಸವದತ್ತಿ ತಾಲ್ಲೂಕಿನಲ್ಲಿ ಯಾವ ಶಾಲೆಯೂ ಗುಡಿಗಳಲ್ಲಿ ನಡೆಯುತ್ತಿಲ್ಲ. ಪೂರ್ಣ ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಉ) ಸರ್ಕಾರದ ಗಮನಕ್ಕೆ ಬಂದಿದೆ.

ಊ) ಬೆಳಗಾವಿ ಜಿಲ್ಲೆಯಾದ್ಯಂತ ಕಟ್ಟಡ ರಹಿತ ಶಾಲೆಗಳನ್ನು ಗುರುಸಿ ಅನುದಾನದ ಲಭ್ಯತೆಯನ್ನು ಆಧರಿಸಿ ಆದ್ಯತೆ ಮೇರೆಗೆ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-2

ಬೈಲಹೊಂಗಲ ತಾಲ್ಲೂಕಿನಲ್ಲಿ ಗುಡಿಗಳಲ್ಲಿ (ದೇವಸ್ಥಾನಗಳಲ್ಲಿ) ನಡೆಯುತ್ತಿರುವ ಪ್ರಾಥಮಿಕ ಶಾಲೆಗಳ ಪಟ್ಟಿ.

ಕ್ರ.ಸಂ	ಕನ್ನಡ ಶಾಲೆಗಳು	ಕ್ರ.ಸಂ	ಉರ್ದು ಶಾಲೆಗಳು
1	ಸ.ಕಿ. ಪ್ರಾ. ಶಾಲೆ, ಜನತಾ ಕಾಲೋನಿ, ನೆಗಿವಾಳ	1	ಉರ್ದು ಪ್ರಾಥಮಿಕ ಶಾಲೆ, ದೇಮಟ್ಟ
2	ಸ.ಕಿ. ಪ್ರಾ. ಶಾಲೆ, ಜನತಾ ಕಾಲೋನಿ, ವಕ್ಕುಂದ	2	ಉರ್ದು ಪ್ರಾಥಮಿಕ ಶಾಲೆ, ಸಂಗೋಳ್ಳಿ
3	ಸ.ಕಿ. ಪ್ರಾ. ಶಾಲೆ, ಬಸವನಗರ ಸಂಪಗಾಂವ್	3	ಉರ್ದು ಪ್ರಾಥಮಿಕ ಶಾಲೆ, ವಣ್ಣೂರು
4	ಸ.ಕಿ. ಪ್ರಾ. ಶಾಲೆ, ನವನಗರ ತಿಗಡಿ	4	ಉರ್ದು ಪ್ರಾಥಮಿಕ ಶಾಲೆ, ಮೇಕಲಮರಡಿ
5	ಸ.ಕಿ. ಪ್ರಾ. ಶಾಲೆ, ಜನತಾ ಕಾಲೋನಿ, ಕೆಲಬಾವಿ	5	ಉರ್ದು ಪ್ರಾಥಮಿಕ ಶಾಲೆ, ಉಗರಖೋಡ
6	ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ ದೊಡವಾಡ	6	ಉರ್ದು ಪ್ರಾಥಮಿಕ ಶಾಲೆ ದೇವಲಾಪುರ
7	ಸ.ಕಿ.ಪ್ರಾ. ಶಾಲೆ, ನೇಕಾರ ಕಾಲೋನಿ, ವಕ್ಕುಂದ	7	ಉರ್ದು ಪ್ರಾಥಮಿಕ ಶಾಲೆ ಹೊಳೆಹೊಸೂರು
8	ಸ.ಕಿ.ಪ್ರಾ. ಶಾಲೆ, ಜನತಾ ಕಾಲೋನಿ, ದೇವಲಾಪುರ ಕ್ರಾಸ್	8	ಉರ್ದು ಪ್ರಾಥಮಿಕ ಶಾಲೆ, ವಕ್ಕುಂದ
9	ಸ.ಕಿ. ಪ್ರಾ. ಶಾಲೆ, ವಿಠೋಬಾನಗರ, ನಾಗನೂರು	9	ಉರ್ದು ಪ್ರಾಥಮಿಕ ಶಾಲೆ, ಬೈಲವಾಡ
10	ಸ.ಕಿ. ಪ್ರಾ. ಶಾಲೆ, ದೇಶಸೂರ ಬಂಗಲೆ	10	ಉರ್ದು ಪ್ರಾಥಮಿಕ ಶಾಲೆ, ಬೈಲಹೊಂಗಲ (ಹಣ್ಣು ಮಕ್ಕಳು)
11	ಸ.ಕಿ. ಪಾ.್ರಶಾಲೆ, ಜನತಾ ಕಾಲೋನಿ, ಹಣಬರಟ್ಟಿ	11	ಉರ್ದು ಪ್ರಾಥಮಿಕ ಶಾಲೆ, ಬೈಲಹೊಂಗಲ
12	ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ, ಬೆಳವಡಿ	12	ಉರ್ದು ಪ್ರಾಥಮಿಕ ಶಾಲೆ, ನವಟಗಿ
13	ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ ಎಂ.ಕೆ. ಹುವಳಿ		

14 ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ
ದೇವರತೀಗಿಹಳ್ಳಿ
15 ಸ.ಕಿ. ಪ್ರಾ. ಶಾಲೆ, ಹಣ್ಣಿಕೇರಿ, ನಂ. 2
16 ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ,
ತುರಮರಿ
17 ಸ.ಕಿ. ಪ್ರಾ. ಶಾಲೆ, ಹೊಸಬಡಾವಣೆ,
ಗವಟಾಣ ಹಣಕೇಕಟ್ಟಿ
18 ಸ.ಕಿ. ಪ್ರಾ. ಶಾಲೆ, ಗಾಂಧಿಚೌಕ,
ನೆಗಿಹಾಳ
19 ಸ.ಕಿ. ಪ್ರಾ. ಶಾಲೆ, ಜನತಾ ಕಾಲೋನಿ,
ತಿಮ್ಮಾಪುರ
20 ಸ.ಕಿ. ಪ್ರಾ. ಶಾಲೆ, ಉಚ್ಚಾನಟ್ಟಿ ಮೇಠಲ
ಮುರಡಿ
21 ಸ.ಕಿ. ಪ್ರಾ. ಶಾಲೆ, ಬಸವನನಗರ,
ಸಂಪಗಾಂವ್
22 ಸ.ಕಿ. ಪ್ರಾ. ಶಾಲೆ, ಲಕ್ಷ್ಮೀನಗರ
ನಾಗನೂರ
23 ಸ.ಕಿ. ಪ್ರಾ. ಶಾಲೆ, ಕ.ಗಂ.ಶಾಲೆ,
ನಂ. 5, ಬೈಲಹೊಂಗಲ
24 ಸ.ಕಿ ಪ್ರಾ. ಶಾಲೆ, ಕಪಿಶಾಲೆ
ಸಂಪಗಾಂವ್
25 ಸ.ಕಿ. ಪ್ರಾ. ಶಾಲೆ, ನಾಗನೂರು

ಅನುಬಂಧ-1

ಬೆಳಗಾವಿ ಜಿಲ್ಲೆಯಲ್ಲಿ ಗುಡಿಗಳಲ್ಲಿ (ದೇವಸ್ಥಾನಗಳಲ್ಲಿ) ನಡೆಯುತ್ತಿರುವ ಪ್ರಾಥಮಿಕ ಶಾಲೆಗಳ ತಾಲ್ಲೂಕುವಾರು ಪಟ್ಟಿ

ಕ್ರ.ಸಂ	ತಾಲ್ಲೂಕು ಹೆಸರು	ಕನ್ನಡ ಶಾಲೆಗಳು	ಉರ್ದು ಶಾಲೆಗಳು
1	ಅಥಣಿ	20	01
2	ಗೋಕಾಕ್	00	02
3	ಮೂಡಲಗಿ	00	01
4	ಹುಕ್ಕೇರಿ	01	00
5	ನಿಪ್ಪಾಣಿ	21	03
6	ರಾಯಭಾಗ	18	02
7	ಚಿಕ್ಕೋಡಿ	01	01

8	ಕಾಗವಾಡ	00	03
9	ಬೆಳಗಾವಿ	00	01
10	ಬೆಳಗಾವಿ ತಾಲ್ಲೂಕು	02	01
11	ಖಾನಾಪುರ	02	02
12	ರಾಮದುರ್ಗಾ	00	00
13	ಬೈಲಹೊಂಗಲ	25	12
14	ಸವದತ್ತಿ	00	00

ಸವದತ್ತಿ ತಾಲ್ಲೂಕಿನ ಹಿರೇಬೂದನೂರು ಗ್ರಾಮದಲ್ಲಿರುವ ಆರ್ಯುವೇದಿಕ ಆಸ್ಪತ್ರೆಗೆ ಕಟ್ಟಡವನ್ನು ಕಟ್ಟುವುದು

1741 (2026) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿರೇಬೂದನೂರ ಗ್ರಾಮಗಳಲ್ಲಿರುವ ಆಯುರ್ವೇದಿಕ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಆಸ್ಪತ್ರೆಗಳಿಗೆ ಕಟ್ಟಡಗಳನ್ನು ಕಟ್ಟಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) ಬಂದಿದೆ.

ಆ) ಇದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು ನಿಯಮಾನುಸಾರ ಕಟ್ಟಡದ ನಿರ್ಮಾಣಕ್ಕೆ ಉಚಿತ ನಿವೇಶನವನ್ನು ಗ್ರಾಮ ಪಂಚಾಯತ್ ವತಿಯಿಂದ ನೀಡಿದಲ್ಲಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾ ಪಂಚಾಯತ್ ಅವಶ್ಯ ಆಯವ್ಯಯವನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಸಿಬ್ಬಂದಿಯ ನೇಮಕಾತಿ

1742 (2089) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಇಲಾಖೆಯಲ್ಲಿ ವಾಹನ ಚಾಲಕರ ಹುದ್ದೆಯಲ್ಲಿ ಹಾಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವ ಚಾಲಕರುಗಳ ಸಂಖ್ಯೆ ಎಷ್ಟು;